

# بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 20-12-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ۔

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ಹಝ್ರತ್ ಉತ್‌ಬ ಬಿನ್ ಗಝ್ವಾನ್[ರ]ರ ಬಗ್ಗೆ ವಿವರಿಸಿದಕ್ಕೆ ಸಂಬಂಧಿಸಿ ಬೇರೆ ಕೆಲವು ವಿಷಯಗಳನ್ನು ನಾನು ಈಗ ವಿವರಿಸುವೆನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜರಿ 2ನೇ ವರ್ಷದಲ್ಲಿ ತನ್ನ ಪಿತೃ ಸಹೋದರಿ ಪುತ್ರ ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್‌ರವರ ನೇತೃತ್ವದಲ್ಲಿ ಒಂದು ಸೇನಾದಳವನ್ನು ನಖ್‌ಲದ ಕಡೆಗೆ ಕಳುಹಿಸಿದರು. ಹಝ್ರತ್ ಉತ್‌ಬ[ರ] ಸಹ ಆ ದಳದಲ್ಲಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ನಿರ್ಧರಿಸಿದ್ದರು. ಮಕ್ಕದ ಖುರೈಶಿಗಳ ಚಲನ ವಲನಗಳನ್ನು ಅವರಿಗೆ ಹೆಚ್ಚು ಸಮೀಪವಾಗಿದ್ದು ತಿಳಿದುಕೊಳ್ಳಬೇಕು. ಅವರ ಬಗ್ಗೆ ಆವಶ್ಯಕ ಮಾಹಿತಿ ಸಕಾಲದಲ್ಲಿ ದೊರೆಯುವುದರ ಮೂಲಕ ಮದೀನ ಪ್ರತಿಯೊಂದು ರೀತಿಯ ಅಚಾನಕ ಆಕ್ರಮಣದಿಂದ ರಕ್ಷಿಸಲ್ಪಡಬೇಕು. ಇದಕ್ಕೋಸ್ಕರ ಮುಹಾಜಿರೀನ್‌ಗಳಾದ ಎಂಟು ಜನರ ತಂಡವನ್ನು ಸಿದ್ಧಪಡಿಸಿದರು. ಆ ತಂಡದಲ್ಲಿ ಖುರೈಶಿಗಳ ವಿವಿಧ ಗೋತ್ರಗಳ ಜನರು ಇರುವಂತೆ ನೋಡಿಕೊಂಡರು. ಆ ಮೂಲಕ ಖುರೈಶಿಗಳ ರಹಸ್ಯ ಇರಾದೆಗಳನ್ನು ತಿಳಿಯಲು ಸುಲಭವಾಗುವಂತೆ ಮಾಡಿದರು. ಈ ತಂಡದ ನೇತಾರನಾಗಿ ತನ್ನ ಪಿತೃ ಸಹೋದರಿ ಪುತ್ರ ಅಬ್ದುಲ್ಲಾ ಬಿನ್ ಜಹ್‌ಶ್‌ರನ್ನು ನೇಮಿಸಿದರು. ಈ ಸೇನಾ ದಳವನ್ನು ಕಳುಹಿಸುವಾಗ ನಿಮ್ಮನ್ನು ಎಲ್ಲಿಗೆ ಏಕೆ ಕಳುಹಿಸುತ್ತಿದ್ದೇವೆ ಎಂದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಲಿಲ್ಲ. ಅವರಿಗೆ ಒಂದು ಮುದ್ರೆ ಹಾಕಿದ ಲಕೋಟೆಯನ್ನು ಕೊಟ್ಟು ಹೇಳಿದರು – ಮದೀನದಿಂದ ಎರಡು ದಿನಗಳ ಪ್ರಯಾಣ ಮುಗಿಸಿದ ನಂತರ ಲಕೋಟೆ ತೆರೆದು ನೋಡಿರಿ ಮತ್ತು ಅದರಲ್ಲಿರುವ ಮಾರ್ಗದರ್ಶನ ಪ್ರಕಾರ ವರ್ತಿಸಿರಿ. ಎರಡು ದಿನಗಳ ಪ್ರಯಾಣ ಮಾಡಿ ಮುಗಿಸಿದ ನಂತರ ಅಬ್ದುಲ್ಲಾ ಲಕೋಟೆ ತೆರೆದು ನೋಡಿದಾಗ ಅದರಲ್ಲಿ ಹೀಗೆ ಬರೆದಿತ್ತು: ನೀವು ಮಕ್ಕ ಮತ್ತು ತಾಯಿಫ್ ಮಧ್ಯದ ನಖ್‌ಲದ ಕಣಿವೆ ಪ್ರದೇಶಕ್ಕೆ ಹೋಗಿರಿ. ಅಲ್ಲಿಗೆ ಹೋಗಿ ಖುರೈಶಿಗಳ ಸ್ಥಿತಿಯ ಬಗ್ಗೆ ತಿಳಿದು ನಮಗೆ ತಿಳಿಸಿರಿ. ಹಾಗೆ ಆ ತಂಡ ನಖ್‌ಲದ ಕಡೆಗೆ ಮುಂದೆ ಸಾಗಿತು. ಮಾರ್ಗಮಧ್ಯೆ ಸಅದ್ ಬಿನ್ ಅಬೀ ವಖಾಸ್ ಮತ್ತು ಉತ್‌ಬ ಬಿನ್ ಗಝ್ವಾನರ ಒಂಟೆಗಳು ಕಾಣೆಯಾದುವು. ಅವರಿಬ್ಬರು ತಮ್ಮ ಒಂಟೆಗಳನ್ನು ಹುಡುಕುತ್ತಾ ತಮ್ಮ ಸಂಗಡಿಗರಿಂದ ಬೇರ್ಪಟ್ಟರು. ಅವರು ಬಹಳ ಹುಡುಕಿದರೂ ತಮ್ಮ ಸಂಗಡಿಗರ ಬಳಿಗೆ ತಲಪಲಾಗಲಿಲ್ಲ. ಆ ಕಾರಣದಿಂದ ಮುಸ್ಲಿಮರ ತಂಡದಲ್ಲಿ ಆರು ಜನರು ಮಾತ್ರ ಬಾಕಿಯಾದರು.

ಮುಸ್ಲಿಮರ ಈ ಚಿಕ್ಕ ಗುಂಪು ನಖ್‌ಲ ತಲಪಿ ತನ್ನ ಕೆಲಸದಲ್ಲಿ ನಿರತವಾಯಿತು. ಅವರಲ್ಲಿ ಕೆಲವರು ತಮ್ಮ ಬಗ್ಗೆ ರಹಸ್ಯ ತಿಳಿಯದಿರಲಿ ಎಂದು ತಲೆಗೂದಲು ಬೋಳಿಸಿದರು. ಯಾಕೆಂದರೆ ತಾವು ಉಮ್ರ ಮಾಡಲು ಬಂದವರೆಂದು ದಾರಿ ಹೋಕರು ಯೋಚಿಸಿ ಯಾವುದೇ ಸಂಶಯ ಹೊಂದದಿರಲಿ ಎಂದು. ಆದರೆ ಅಚಾನಕವಾಗಿ ಅಲ್ಲಿಗೆ ಖುರೈಶಿಗಳ ಒಂದು ಚಿಕ್ಕ ವ್ಯಾಪಾರಿ ಸಂಘ ಆಗಮಿಸಿತು. ಅದು ತಾಯಿಫ್‌ನಿಂದ ಮಕ್ಕದ ಕಡೆಗೆ ಸಂಚರಿಸುತ್ತಿತ್ತು. ಆಗ ಎರಡು ತಂಡಗಳು ಎದುರುಬದುರಾದುವು. ಆಗ ಮುಸ್ಲಿಮರು ಸಮಾಲೋಚಿಸಿದರು, ಈಗ ಏನು ಮಾಡಬೇಕೆಂದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ರಹಸ್ಯವಾಗಿ ಸಮಾಚಾರ ತಿಳಿಯಲು ಕಳುಹಿಸಿದ್ದರು. ಕ್ರಮಬದ್ಧವಾದ ಆಕ್ರಮಣ ಮಾಡಲು ಕಳುಹಿಸಿರಲಿಲ್ಲ. ಈಗ ಎರಡು ವಿರೋಧಿ ಪಂಗಡಗಳು ಎದುರಾಗಿದ್ದುವು. ಖುರೈಶಿಗಳು ತಮ್ಮನ್ನು ಕಂಡ ಕಾರಣ ತಮ್ಮ ಉದ್ದೇಶ ರಹಸ್ಯವಾಗಿ ಇರಲಾರದೆಂದು ಮುಸ್ಲಿಮರಿಗೆ ಭಾಸವಾಯಿತು. ಕೆಲವು ಮುಸ್ಲಿಮರು ಹೀಗೆ ಯೋಚಿಸಿದ್ದರು, ಯುದ್ಧ ನಿಷಿದ್ಧ ತಿಂಗಳಲ್ಲಿ ಒಂದಾದ ರಜಬ್ ತಿಂಗಳ ಕೊನೆಯ ದಿನಗಳಾದ ಕಾರಣ ಯುದ್ಧ ಮಾಡಬಾರದು. ಅಲ್ಲದೆ ನಖ್‌ಲದ ಕಣಿವೆ ಯುದ್ಧ ನಿಷಿದ್ಧ ಪ್ರದೇಶದ ಗಡಿಯಲ್ಲಿತ್ತು. ಈ ದಿನವೇ ನಿರ್ಧಾರ ಕೈಗೊಳ್ಳದಿದ್ದರೆ ಆ ವ್ಯಾಪಾರಿ ತಂಡ ಹರಮ್ ಪ್ರದೇಶಕ್ಕೆ (ಯುದ್ಧ ನಿಷಿದ್ಧ ಪ್ರದೇಶಕ್ಕೆ) ಪ್ರವೇಶಿಸುತ್ತಿತ್ತು. ಈ ಎಲ್ಲಾ ವಿಷಯಗಳನ್ನು ಯೋಚಿಸಿ ಮುಸ್ಲಿಮರು ಆಕ್ರಮಣ ಮಾಡುವ ನಿರ್ಧಾರ ಕೈಗೊಂಡರು. ಆಕ್ರಮಣ ಮಾಡಿದಾಗ ಒಬ್ಬ ಅವಿಶ್ವಾಸಿ ಹತನಾದನು. ಇಬ್ಬರು ಸೆರೆ ಹಿಡಿಯಲ್ಪಟ್ಟರು. ನಾಲ್ಕನೆಯವ ಓಡಿ ಹೋದನು. ಅವನನ್ನು ಹಿಡಿಯಲಾಗಲಿಲ್ಲ ಈ ರೀತಿ ಮುಸ್ಲಿಮರ ಪ್ರಯತ್ನ ಪೂರ್ಣ ಜಯಗಳಿಸಲಿಲ್ಲ. ಅನಂತರ ಮುಸ್ಲಿಮರು ಆ ವ್ಯಾಪಾರಿ ತಂಡದ ಸಾಮಗ್ರಿಗಳನ್ನು ವಶಪಡಿಸಿಕೊಂಡರು. ಒಬ್ಬನು ಓಡಿ ಹೋದ ಕಾರಣ ಈ ವಿಷಯ ಮಕ್ಕದವರಿಗೆ ಬೇಗನೆ ತಿಳಿಯುವ ಸಾಧ್ಯತೆ ಇತ್ತು. ಆದುದರಿಂದ ಅಬ್ದುಲ್ಲಾ ಬಿನ್ ಜಹ್‌ಶ್ ಮತ್ತು ಸಂಗಡಿಗರು ಹಿಂದಿರುಗಿ ಬೇಗ ಬೇಗನೆ ಮದೀನಕ್ಕೆ ತಲಪಿದರು. ಈ ತಂಡದ ಜನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಎಲ್ಲಾ ಘಟನೆ ವಿವರಿಸಿದಾಗ ಅವರು ಬಹಳ ಕೋಪಗೊಂಡರು ಮತ್ತು ಹೇಳಿದರು, ನಾನು ನಿಮಗೆ ನಿಷಿದ್ಧ ತಿಂಗಳಲ್ಲಿ ಯುದ್ಧ ಮಾಡಲು ಅನುಮತಿ ನೀಡಿರಲಿಲ್ಲ. ಅವರು ಯುದ್ಧದಲ್ಲಿ ದೊರೆತ ಸಂಪತ್ತನ್ನು ಪಡೆಯಲು ಸಹ ಒಪ್ಪಲಿಲ್ಲ. ಆಗ ಹಝ್ರತ್ ಅಬ್ದುಲ್ಲಾ ಮತ್ತು ಸಂಗಡಿಗರು ಬಹಳ

ಲಜ್ಜಿತರಾಗಿ ಪಶ್ಚಾತ್ತಾಪಗೊಂಡರು. ಅಲ್ಲಾಹ್ ಮತ್ತು ಅವನ ರಸೂಲರ ಕೋಪದ ಕಾರಣ ನಾಶವಾದೆವು ಎಂದು ಅವರು ಯೋಚಿಸಿದರು. ಸಹಾಬರು ಸಹ ಅವರನ್ನು ಕಠಿಣವಾಗಿ ದೂಷಿಸಿ ಹೇಳಿದರು: ನೀವು ಇದೇನು ಮಾಡಿದಿರಿ ಎಂದು.

ಅತ್ತ ಖುರೈಶಿಗಳು ಗುಲ್ಲೆಬ್ಬಿಸತೊಡಗಿದರು ಮುಸ್ಲಿಮರು ಪವಿತ್ರ ತಿಂಗಳ ಪಾವಿತ್ರ್ಯವನ್ನು ಕೆಡಿಸಿದರೆಂದು. ಕೊಲ್ಲಲ್ಪಟ್ಟವನು ಅಮರ್ ಬಿನ್ ಹಝ್ರಮಿ ಎಂಬ ಒಬ್ಬ ಗಣ್ಯ ವ್ಯಕ್ತಿಯಾಗಿದ್ದನು. ಅವನು ಮಕ್ಕದ ಇನ್ನೊಬ್ಬ ಗಣ್ಯ ವ್ಯಕ್ತಿ ಉತ್ಬ ಬಿನ್ ರಬೀಅನೊಂದಿಗೆ ಪ್ರತಿಜ್ಞಾ ಬದ್ಧನಾಗಿದ್ದನು. ಆದುದರಿಂದ ಖುರೈಶಿಗಳ ಕೋಪಾಗ್ನಿ ಬಹಳ ಪ್ರಜ್ವಲಿಸಿತು ಮತ್ತು ಅವರು ಮದೀನವನ್ನು ಆಕ್ರಮಿಸಲು ಹಿಂದೆಂದಿಗಿಂತಲೂ ತೀವ್ರವಾದ ಸಿದ್ಧತೆ ಮಾಡಲು ತೊಡಗಿದರು. ಈ ಘಟನೆಯ ಕಾರಣದಿಂದ ಮುಸ್ಲಿಮರ ಮತ್ತು ಅವಿಶ್ವಾಸಿಗಳ ಮಧ್ಯೆ ಅನೇಕ ವಾಗ್ವಾದಗಳು ನಡೆದುವು. ಆಗ ಪವಿತ್ರ ಖುರ್ಆನಿನ ಈ ಕೆಳಗಿನ ವಚನ ಅವತೀರ್ಣಗೊಂಡಿತು ಮತ್ತು ಮುಸ್ಲಿಮರಿಗೆ ಸಮಾಧಾನವುಂಟಾಯಿತು.

يَسْأَلُونَكَ عَنِ الشَّهْرِ الْحَرَامِ قِتَالٍ فِيهِ ۖ قُلْ قِتَالٌ فِيهِ كَبِيرٌ ۖ وَصَدٌّ عَن سَبِيلِ اللَّهِ وَكُفْرٌ بِهِ وَالْمَسْجِدِ الْحَرَامِ وَإِخْرَاجُ أَهْلِهِ مِنْهُ أَكْبَرُ عِندَ اللَّهِ ۚ وَالْفِتْنَةُ أَكْبَرُ مِنَ الْقَتْلِ ۗ وَلَا يَزَالُونَ يُقَاتِلُونَكُمْ حَتَّىٰ يَرُدُّوكُمْ عَن دِينِكُمْ إِنِ اسْتَطَاعُوا ۚ

**ಯಸ್‌ಅಲೂನಕ ಅನಿಶ್ಶಹ್‌ರಿಲ್ ಹರಾಮಿ ಖಿತಾಲಿನ್ ಫೀಹಿ. ಖುಲ್ ಖಿತಾಲುನ್ ಫೀಹಿ ಕಬೀರುನ್. ವಸದ್ದುನ್ ಅನ್ ಸಬೀಲಿಲ್ಲಾಹಿ ವ ಕುಫ್‌ರುನ್ ಬಿಹೀ ವಲ್ ಮಸ್‌ಜಿದಿಲ್ ಹರಾಮಿ ವಲ್ ಇಖ್‌ರಾಜು ಅಹ್‌ಲಿಹೀ ಮಿನ್‌ಹು ಅಕ್‌ಬರು ಇಂದಲ್ಲಾಹಿ, ವಲ್ ಫಿತ್‌ನತು ಅಕ್‌ಬರು ಮಿನಲ್ ಖತ್‌ಲಿ, ವಲಾ ಯಝಾಲೂನ ಯುಖಾತಿಲೂನಕುಮ್ ಹತ್ತಾ ಯರುದ್ದೂಕುಮ್ ಅನ್ ದೀನಿಕುಮ್ ಇನಿಸ್ತತಾಊ.**

ಆದರಣೀಯ ಮಾಸದ ಕುರಿತು – ಅದರಲ್ಲಿ ಯುದ್ಧ ಮಾಡುವ ಬಗ್ಗೆ – ಅವರು ನಿನ್ನೊಡನೆ ಕೇಳುತ್ತಾರೆ. ಹೇಳು: ಅದರಲ್ಲಿ ಯುದ್ಧ ಮಾಡುವುದು ಮಹಾ ಅಪರಾಧವಾಗಿದೆ. ಆದರೆ ಅಲ್ಲಾಹನ ಮಾರ್ಗದಿಂದ (ಜನರನ್ನು) ತಡೆಯುವುದೂ ಅವನನ್ನು (ಅಲ್ಲಾಹನನ್ನು) ಹಾಗೂ ಮಸ್‌ಜಿದುಲ್ ಹರಾಮನ್ನು ನಿರಾಕರಿಸುವುದೂ ಅಲ್ಲಿನ ನಿವಾಸಿಗಳನ್ನು ಅಲ್ಲಿಂದ ಹೊರಗೆ ಅಟ್ಟುವುದೂ ಅಲ್ಲಾಹನ ದೃಷ್ಟಿಯಲ್ಲಿ (ಅದಕ್ಕಿಂತಲೂ) ಘೋರ ಅಪರಾಧವಾಗಿದೆ. ಫಿತ್ನ ಕೊಲೆಗಿಂತ ದೊಡ್ಡ ಅಪರಾಧವಾಗಿದೆ. ಅವರಿಗೆ ಸಾಧ್ಯವೆಂದಾದರೆ ನಿಮ್ಮ ಧರ್ಮದಿಂದ ನಿಮ್ಮನ್ನು ಮರಳಿಸುವರೆಗೆ ಅವರು ನಿಮ್ಮೊಡನೆ ಯುದ್ಧ ಮಾಡುತ್ತಲೇ ಇರುವರು. (2:218).

ಅಲ್ಲಾಹನು ನೀಡಿದ ಈ ಉತ್ತರದಿಂದ ಮುಸ್ಲಿಮರಿಗೆ ಸಮಾಧಾನವಾಯಿತು. ಖುರೈಶಿಗಳು ಸಹ ಸ್ವಲ್ಪ ತಣ್ಣಗಾದರು. ತಮ್ಮ ಎರಡು ಕೈದಿಗಳನ್ನು ಬಿಡಿಸಲು ಖುರೈಶಿಗಳು ಇಬ್ಬರನ್ನು ಮದೀನಕ್ಕೆ ಕಳುಹಿಸಿದರು. ಆದರೆ ಸಅದ್ ಬಿನ್ ಅಬೀ ವಖಾಸ್ ಮತ್ತು ಉತ್ಬ ಬಿನ್ ಗಝ್ವಾನ್ ವಾಪಸು ಬರದ ಕಾರಣದಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವರ ಬಗ್ಗೆ ಆತಂಕವಿತ್ತು. ಅವರಿಬ್ಬರೂ ಖುರೈಶಿಗಳ ಕೈಗೆ ಸಿಕ್ಕಿಬಿದ್ದರೆ ಅವರನ್ನು ಜೀವಂತವಾಗಿರಿಸಲಾರರು ಎಂದು. ಆದುದರಿಂದ ಅವರಿಬ್ಬರು ಮರಳಿ ಬರುವ ತನಕ ಕೈದಿಗಳನ್ನು ಬಿಡುಗಡೆ ಮಾಡಲು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಒಪ್ಪಲಿಲ್ಲ. ನಮ್ಮ ಇಬ್ಬರು ಮರಳಿ ಬಂದರೆ ನಿಮ್ಮಿಬ್ಬರು ಕೈದಿಗಳನ್ನು ಬಿಡುವೆನು ಎಂದು ಹೇಳಿದರು. ಕಾಣೆಯಾದವರು ಮರಳಿ ಬಂದಾಗ ಕೈದಿಗಳಾದ ಇಬ್ಬರನ್ನು ಪರಿಹಾರ ಪಡೆದು ಬಿಡುಗಡೆಗೊಳಿಸಲಾಯಿತು. ಆದರೆ ಮದೀನದಲ್ಲಿದ್ದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸದ್ಗುಣಗಳಿಂದ ಮತ್ತು ಇಸ್ಲಾಮೀ ಉಪದೇಶಗಳ ಸತ್ಯತೆಗಳಿಂದ ಪ್ರಭಾವಿತನಾದ ಓರ್ವ ಕೈದಿ ಸ್ವತಂತ್ರನಾದ ಬಳಿಕವೂ ಮಕ್ಕಕ್ಕೆ ಮರಳಿ ಹೋಗಲು ನಿರಾಕರಿಸಿದನು. ಅವನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೈಯಲ್ಲಿ ಬೈಅತ್ ಮಾಡಿ ಮುಸ್ಲಿಮನಾಗಿ ಜೀವಿಸಿದನು. ಅನಂತರ ಬಿಅ್‌ರ್ ಮಊನ ಘಟನೆಯಲ್ಲಿ ಶಹೀದನಾದನು.

ಹಝ್ರತ್ ಉತ್ಬ ಬಿನ್ ಗಝ್ವಾನ್ ಬದರ್ ಸಮೇತ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಭಾಗವಹಿಸಿದರು. ಅವರು ನಿಷ್ಣಾತ ಬಿಲ್ಲುಗಾರರಲ್ಲಿ ಒಬ್ಬರಾಗಿದ್ದರು. ಹಝ್ರತ್ ಉಮರ್[ರ] ಹಝ್ರತ್ ಉತ್ಬರನ್ನು ಬಸ್ರಾ ಪಟ್ಟಣ ಸ್ಥಾಪಿತವಾದ ಭೂಮಿಯ ಕಡೆಗಿರುವ ಉಬುಲ ಎಂಬಲ್ಲಿನ ಜನರ ವಿರುದ್ಧ ಹೋರಾಡಲು ಕಳುಹಿಸಿದರು. ಅವರು ಪರ್ಶಿಯಾದ ಜನರಾಗಿದ್ದರು. ಹಝ್ರತ್ ಉಮರ್[ರ] ಹಝ್ರತ್ ಉತ್ಬರನ್ನು ಬಸ್ರದ ಕಡೆಗೆ ಎಂಟು ನೂರು ಸೈನಿಕರೊಂದಿಗೆ ಸಹ ಕಳುಹಿಸಿದ್ದರು. ಅನಂತರ ಹೆಚ್ಚಿನ ಸಹಾಯ ತಲಪಿಸಿದರು. ಹಝ್ರತ್ ಉತ್ಬರು ಉಬುಲ ಎಂಬ ಸ್ಥಳವನ್ನು ಜಯಿಸಿದರು. ಆ ಸ್ಥಳದಲ್ಲಿ ಬಸ್ರಾ ಪಟ್ಟಣದ ಹದ್ದುಬಸ್ತುಗಳನ್ನು ನಿಶ್ಚಯಿಸಿದರು. ಬಸ್ರಾ ನಗರವನ್ನು ಸ್ಥಾಪಿಸಿ ಅದನ್ನು ಜನನಿಬಿಡ ಗೊಳಿಸಿದವರು ಹಝ್ರತ್ ಉತ್ಬ ಆಗಿದ್ದರು. ಅನಂತರ ಹಝ್ರತ್ ಉಮರ್[ರ], ಹಝ್ರತ್ ಉತ್ಬರನ್ನು ಬಸ್ರದ ಗವರ್ನರ್ ಆಗಿ ನೇಮಿಸಿದರು. ಅವರು ಖರೀಬ ಎಂಬಲ್ಲಿ ತಂಗಿದ್ದರು. ಹಝ್ರತ್ ಉತ್ಬ, ಹಝ್ರತ್ ಉಮರ[ರ]ರಿಗೆ ಒಂದು ಪತ್ರ ಬರೆದು, ಮುಸ್ಲಿಮರು ಚಳಿಗಾಲವನ್ನು ಕಳೆಯಲು ಮತ್ತು ಯುದ್ಧಗಳಿಂದ ಮರಳಿದಾಗ ತಂಗಲು ಒಂದು ಸ್ಥಳ ಆವಶ್ಯಕವಾಗಿದೆ ಎಂದು ತಿಳಿಸಿದರು. ಅದಕ್ಕೆ ಹಝ್ರತ್ ಉಮರ್[ರ] ಉತ್ತರ ನೀಡಿದರು, ಮುಸ್ಲಿಮರನ್ನು ಎಂತಹ ಸ್ಥಳದಲ್ಲಿ ನೆಲಸುವಂತೆ ಮಾಡಬೇಕೆಂದರೆ ಅಲ್ಲಿ ನೀರು ಮತ್ತು ಹುಲ್ಲುಗಾವಲು ಸಮೀಪದಲ್ಲಿ ಇರಬೇಕು. ಹಾಗೆ ಹಝ್ರತ್ ಉತ್ಬ ಮುಸ್ಲಿಮರನ್ನು ಬಸ್ರಾಕ್ಕೆ ಕರೆದುಕೊಂಡು ಹೋಗಿ ನೆಲಸುವಂತೆ ಮಾಡಿದರು. ಹಝ್ರತ್ ಉತ್ಬ ಹಜ್ ಮಾಡಲು ಹೊರಟಾಗ ಮುಜಾಶಿಅ್ ಬಿನ್ ಮಸೂದರನ್ನು ತನ್ನ ಸ್ಥಾನಕ್ಕೆ ನೇಮಿಸಿದರು. ಯುಫ್ರೆಟಿಸ್ ನದಿಯ ಕಡೆಗೆ ಸಾಗಲು ಆಜ್ಞಾಪಿಸಿದರು. ಹಝ್ರತ್ ಮುಗೈರ ಬಿನ್ ಶಅಬರಿಗೆ ನಮಾಝುಗಳ ಇಮಾಮ್ ಆಗಲು ನಿಶ್ಚಯಿಸಿದರು. ಹಝ್ರತ್ ಉತ್ಬ ಹಝ್ರತ್ ಉಮರ್[ರ]ರ ಬಳಿ ಬಂದು ತಾನು ಬಸ್ರದ ಗವರ್ನರ್ ಸ್ಥಾನಕ್ಕೆ ರಾಜಿನಾಮೆ ನೀಡುವುದಾಗಿ ತಿಳಿಸಿದರು.

ಆದರೆ ಹಝ್ರತ್ ಉಮರ್(ರ) ರಾಜಿನಾಮೆ ಅಂಗೀಕರಿಸಲಿಲ್ಲ. ಹಝ್ರತ್ ಉತ್‌ಬ ಪ್ರಾರ್ಥಿಸಿದರು: ಓ ಅಲ್ಲಾಹ್ ನನ್ನನ್ನು ಆ ನಗರದ ಕಡೆಗೆ ಮರಳಿಸಬೇಡ. ಅನಂತರ ಅವರು ಸವಾರಿ ಮೃಗದ ಮೇಲಿನಿಂದ ಬಿದ್ದು ಹಿಜರಿ 17ರಲ್ಲಿ ನಿಧನ ಹೊಂದಿದರು. ಅವರು ಮೃತರಾದಾಗ ಅವರ ಗುಲಾಮನು ಅವರು ಬಿಟ್ಟು ಹೋದ ವಸ್ತುಗಳನ್ನು ಹಝ್ರತ್ ಉಮರ್(ರ)ರ ಬಳಿಗೆ ತಂದೊಪ್ಪಿಸಿದನು. ಅವರು 57 ವರ್ಷ ಪ್ರಾಯದ ತನಕ ಜೀವಿಸಿದರು. ಅವರು ಎತ್ತರದ ದೇಹ ಹೊಂದಿ ಸುಂದರವಾಗಿದ್ದರು.

ನಾನು ಪ್ರಸ್ತಾಪಿಸುವ ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಸಅದ್ ಬಿನ್ ಉಬಾದ(ರ). ಅವರ ಉಪನಾಮ ಅಬೂ ಸಾಬಿತ್ ಎಂದಾಗಿದೆ. ಅವರು ಮುಖಂಡರೂ ದಾನಶೀಲರೂ ಆಗಿದ್ದರು. ಎಲ್ಲಾ ಯುದ್ಧಗಳಲ್ಲಿ ಅನ್‌ಸಾರ್‌ಗಳ ಪತಾಕೆ ಅವರ ಕೈಯ್ಯಲ್ಲಿತ್ತು. ಅವರು ಅನ್‌ಸಾರ್‌ಗಳಲ್ಲಿ ಪ್ರಮುಖರೂ ಅಧಿಕಾರ ಪಡೆದವರೂ ಆಗಿದ್ದರು. ಅವರ ನಾಯಕತ್ವವನ್ನು ಅವರ ಜನರು ಅಂಗೀಕರಿಸಿದ್ದರು. ಅವರು ಅಜ್ಞಾನ ಕಾಲದಲ್ಲಿ ಅರಬಿ ಬರೆಯಲು ಕಲಿತಿದ್ದರು. ಆ ಕಾಲದಲ್ಲಿ ಅರಬಿ ಬರೆಯಲು ಕಲಿತವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದರು. ಅವರು ಈಜುವುದರಲ್ಲಿಯೂ ಬಿಲ್ಲುಗಾರಿಕೆಯಲ್ಲೂ ನಿಪುಣರಾಗಿದ್ದರು. ಅಂತಹ ನಿಪುಣರನ್ನು ಕಾಮಿಲ್ ಎಂದು ಕರೆಯುತ್ತಿದ್ದರು. ಹಿಶಾಮ್ ಬಿನ್ ಉರ್ವ ತನ್ನ ಪಿತನಿಂದ ವರದಿ ಮಾಡುತ್ತಾರೆ: ನಾನು ಸಅದ್ ಬಿನ್ ಉಬಾದರನ್ನು ಕಂಡಾಗ ಅವರು ತಮ್ಮ ಕೋಟೆಯಿಂದ ಕೂಗಿ ಹೇಳುತ್ತಿದ್ದರು: ಯಾರಾದರೂ ಮಾಂಸ ಮತ್ತು ಚರ್ಬಿ ಇಷ್ಟ ಪಡುವುದಾದರೆ ಸಅದ್ ಬಿನ್ ಉಬಾದನ ಬಳಿಗೆ ಬರಲಿ. ಅವರ ಪುತ್ರ ಸಹ ಇದೇ ರೀತಿ ಕರೆ ನೀಡುತ್ತಿರುವುದಾಗಿ ಕಂಡಿದ್ದೇನೆ. ಹಝ್ರತ್ ಸಅದ್ ಬೈಅತ್ ಅಖಬ ಸಾನಿಯ ಸಂದರ್ಭದಲ್ಲಿ ಇಸ್ಲಾಮಿಗೆ ಸೇರಿದರು.

ಸೀರತ್ ಖಾತಮುನ್ನಬಿಯ್ಯೀನ್ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ: ನಬವಿ ವರ್ಷ 13 ಝಿಲ್‌ಹಜ್ಜ್ ತಿಂಗಳಲ್ಲಿ ಹಜ್ ಸಂದರ್ಭದಲ್ಲಿ ಔಸ್ ಮತ್ತು ಖಝ್ರಜ್ ಗೋತ್ರಗಳ ಅನೇಕರು ಮಕ್ಕಕ್ಕೆ ಆಗಮಿಸಿದ್ದರು. ಅವರಲ್ಲಿ ಎಪ್ಪತ್ತು ಜನರು ಮುಸ್ಲಿಮರಾದವರು ಅಥವಾ ಮುಸ್ಲಿಮರಾಗಲು ಇಚ್ಚಿಸುತ್ತಿದ್ದವರಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮುಸ್‌ಇಬರ ಮೂಲಕ ಅನ್‌ಸಾರ್‌ಗಳ ಆಗಮನದ ಸಮಾಚಾರ ದೊರೆತಿತ್ತು. ಅವರಲ್ಲಿ ಕೆಲವರು ವೈಯಕ್ತಿಕವಾಗಿ ಪ್ರವಾದಿವರ್ಯರನ್ನು ಬೇಟಿ ಸಹ ಆಗಿದ್ದರು. ಆದರೂ ಆ ಸಂದರ್ಭದಲ್ಲಿ ಎಲ್ಲರನ್ನೂ ಒಗ್ಗೂಡಿಸಿ ಬೇರೆ ಒಂದು ಭೇಟಿಯ ಆವಶ್ಯಕತೆ ಇತ್ತು. ಆದುದರಿಂದ ಹಜ್ ಕರ್ಮಗಳನ್ನು ನೆರವೇರಿಸಿದ ನಂತರ ಝಿಲ್‌ಹಜ್ಜ್ ತಿಂಗಳ ಮಧ್ಯದ ದಿನಾಂಕ ನಿಶ್ಚಯಿಸಲಾಯಿತು. ಆ ದಿನ ಮಧ್ಯ ರಾತ್ರಿಯ ಸಮಯದಲ್ಲಿ ಎಲ್ಲಾ ಜನರು ಹಿಂದಿನ ವರ್ಷ ಬೇಟಿಯಾದ ಕಣಿವೆ ಪ್ರದೇಶದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಬೇಟಿಯಾಗಬೇಕೆಂದು ನಿರ್ಧರಿಸಲಾಯಿತು. ಆ ನಿಶ್ಚಯಿಸಲಾದ ದಿನದಂದು ರಾತ್ರಿಹೊತ್ತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮನೆಯಿಂದ ಒಬ್ಬರೇ ಹೊರಟರು. ಮಾರ್ಗ ಮಧ್ಯದಲ್ಲಿ ತನ್ನ ಚಿಕ್ಕಪ್ಪ ಅಬ್ಬಾಸರನ್ನು ಕರೆದುಕೊಂಡು ಹೋದರು. ಅಬ್ಬಾಸ್ ಆಗ ಬಹುದೇವಾರಾಧಕರಾಗಿದ್ದರೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುತ್ತಿದ್ದರು. ಇಬ್ಬರು ಸೇರಿಕೊಂಡು ನಿಗದಿತ ಸ್ಥಳಕ್ಕೆ ತಲಪಿದರು. ಅನ್‌ಸಾರ್‌ಗಳು ಸಹ ಒಬ್ಬೊಬ್ಬರಾಗಿ ಇಬ್ಬಿಬ್ಬರಾಗಿ ಅಲ್ಲಿಗೆ ತಲಪಿದರು. ಪ್ರಥಮವಾಗಿ ಅಬ್ಬಾಸ್ ಮಾತನಾಡಲು ತೊಡಗಿ ಹೀಗೆ ಹೇಳಿದರು: ಖಝ್ರಜ್ ಗುಂಪಿನ ಜನರೇ, ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತನ್ನ ಕುಟುಂಬದಲ್ಲಿ ಗೌರವಾನ್ವಿತನೂ ಪ್ರೀತಿಸಲ್ಪಡುವವನೂ ಆಗಿದ್ದಾರೆ. ಅವರ ಕುಟುಂಬ ಇಂದಿನ ತನಕ ಅವರ ಸಂರಕ್ಷಣೆಯ ಹೊಣೆಗಾರಿಕೆ ಹೊತ್ತಿರುತ್ತದೆ. ಪ್ರತಿಯೊಂದು ಅಪಾಯದ ಸಂದರ್ಭದಲ್ಲಿ ಅವರಿಗೆ ಸಂರಕ್ಷಣೆ ನೀಡಿದೆ. ಈಗ ಮುಹಮ್ಮದ್ ತನ್ನ ಊರನ್ನು ಬಿಟ್ಟು ನಿಮ್ಮ ಬಳಿಗೆ ಬರಲು ಇಚ್ಛಿಸುತ್ತಿದ್ದಾರೆ. ನೀವು ಅವರನ್ನು ನಿಮ್ಮ ಬಳಿಗೆ ಕರೆದುಕೊಂಡು ಹೋಗಲು ಇಚ್ಛಿಸುವುದಾದರೆ ನೀವು ಅವರನ್ನು ಎಲ್ಲ ವಿಧಗಳಲ್ಲೂ ಸಂರಕ್ಷಿಸಬೇಕು. ಪ್ರತಿಯೊಬ್ಬ ವಿರೋಧಿಯ ಎದುರು ಎದೆ ಸೆಟೆದು ನಿಲ್ಲಬೇಕು. ನೀವು ಹಾಗೆ ಮಾಡಲು ಸಿದ್ಧರಾಗಿದ್ದರೆ ಅದು ಉತ್ತಮವೇ ಆಗಿದೆ. ಹಾಗಲ್ಲವಾದರೆ ಈಗ ಸ್ಪಷ್ಟವಾಗಿ ಹೇಳಿರಿ. ಏಕೆಂದರೆ ಸ್ಪಷ್ಟವಾದ ಉತ್ತರ ಉತ್ತಮವಾಗಿರುತ್ತದೆ. ಆಗ ಅನ್‌ಸಾರ್‌ಗಳ ಗುಂಪಿನ ವೃದ್ಧರೂ ಪ್ರಭಾವಶಾಲಿಯೂ ಆಗಿದ್ದ ಅಲ್‌ಬರಾ ಬಿನ್ ಮಅ್‌ರೂರ್ ಹೇಳಿದರು: ಅಬ್ಬಾಸ್, ನಾವು ನಿಮ್ಮ ಮಾತು ಆಲಿಸಿದೆವು. ಆದರೆ ಹಝ್ರತ್ ರಸೂಲುಲ್ಲಾಹ್ ಸ್ವತಃ ತಮ್ಮ ಪವಿತ್ರ ನಾಲಗೆಯಿಂದ ಏನಾದರೂ ಹೇಳಬೇಕೆಂದು ನಾವು ಇಚ್ಛಿಸುತ್ತೇವೆ. ಅವರು ನಮ್ಮ ಮೇಲೆ ಏನು ಹೊಣೆಗಾರಿಕೆ ಹೇರಲು ಬಯಸುತ್ತಾರೆ ಎಂಬುದನ್ನು ಅವರು ಸ್ವತಃ ವಿವರಿಸಲಿ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ಪಠಿಸಿದರು ಮತ್ತು ಇಸ್ಲಾಮಿನ ತತ್ವೋಪದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಹುಖೂಖುಲ್ಲಾಹ್ ಮತ್ತು ಹುಖೂಖುಲ್ ಇಬಾದ್ ಬಗ್ಗೆ ವಿವರಿಸುತ್ತಾ ಹೇಳಿದರು: ನಾನು ನಿಮ್ಮಿಂದ ಕೇವಲ ಇಷ್ಟುಮಾತ್ರ ಬಯಸುತ್ತೇನೆ. ನೀವು ನಿಮ್ಮ ಕುಟುಂಬದವರನ್ನೂ ಸಂಬಂಧಿಕರನ್ನೂ ರಕ್ಷಿಸುವ ಹಾಗೆ ಆವಶ್ಯಕ ಸಂದರ್ಭಗಳಲ್ಲಿ ನನ್ನೊಂದಿಗೆ ಸಹ ಹಾಗೆಯೇ ವರ್ತಿಸಬೇಕು. ಈ ಭಾಷಣವನ್ನು ಆಲಿಸಿದ ನಂತರ ಅಲ್‌ಬರಾ ಬಿನ್ ಮಅ್‌ರೂರ್, ಅರಬಿಗಳ ಆಚಾರ ಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೈಯನ್ನು ತನ್ನ ಕೈಯಲ್ಲಿ ಇರಿಸಿ ಹೇಳಿದರು: ಯಾ ರಸೂಲುಲ್ಲಾಹ್, ನಿಮ್ಮನ್ನು ಸತ್ಯದೊಂದಿಗೆ ಕಳುಹಿಸಿದ ಅಲ್ಲಾಹನಾಣೆ ನಾವು ತಮ್ಮನ್ನು ನಮ್ಮ ಜೀವಗಳನ್ನು ಸಂರಕ್ಷಿಸುವ ಹಾಗೆ ಸಂರಕ್ಷಿಸುವೆವು. ನಾವು ಖಡ್ಗಗಳ ನೆರಳಲ್ಲಿ ಬೆಳೆದವರಾಗಿದ್ದೇವೆ.

ಅಲ್‌ಬರಾ ತನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಲೇ ಅಬುಲ್ ಹೈಸಮ್ ಬಿನ್ ತೈಹಾನ್ ಹೇಳಿದರು: ಯಾ ರಸೂಲುಲ್ಲಾಹ್, ಯಸ್‌ರಿಬ್‌ನ ಯಹೂದಿಯರೊಂದಿಗೆ ನಮಗೆ ದೀರ್ಘ ಕಾಲದಿಂದ ಸಂಬಂಧಗಳು ಇವೆ. ನಾವು ನಿಮ್ಮ ಜೊತೆ ಸೇರುವಾಗ ಅವರು ಸಂಬಂಧಗಳನ್ನು ವಿಚ್ಛೇಧಿಸುವರು. ಹೀಗಿರುವಾಗ ತಮಗೆ ಅಲ್ಲಾಹನು ವಿಜಯ ನೀಡಿದಾಗ ನೀವು

ನಮ್ಮನ್ನು ಬಿಟ್ಟು ನಿಮ್ಮ ಊರಿಗೆ ಮರಳಿದರೆ ನಾವು ಅಲ್ಲಿನವರೊಂದಿಗೂ ಇಲ್ಲಿನವರೊಂದಿಗೂ ಇಲ್ಲದಂತಹ ಸ್ಥಿತಿಯಲ್ಲಿ ಆಗುವೆವು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಗುತ್ತಾ ಹೇಳಿದರು: ಇಲ್ಲ. ಇಲ್ಲ. ಖಂಡಿತವಾಗಿಯೂ ಹಾಗೆ ಸಂಭವಿಸಲಾರದು. ನಿಮ್ಮ ರಕ್ತ ನನ್ನ ರಕ್ತವಾಗುವುದು. ನಿಮ್ಮ ಸ್ನೇಹಿತರು ನನ್ನ ಸ್ನೇಹಿತರಾಗುವರು. ನಿಮ್ಮ ಶತ್ರುಗಳು ನನ್ನ ಶತ್ರುಗಳು ಆಗುವರು. ಆಗ ಅಬ್ಬಾಸ್ ಬಿನ್ ಉಬಾದ ಅನ್ಸಾರಿ ತನ್ನ ಸಂಗಡಿಗರನ್ನು ನೋಡುತ್ತಾ ಹೇಳಿದರು: ಈ ಪ್ರತಿಜ್ಞೆಯ ಅರ್ಥವೇನೆಂದು ನಿಮಗೆ ತಿಳಿದಿದೆಯೇ? ಇದರ ಅರ್ಥವೇನೆಂದರೆ ಈಗ ನೀವು ಪ್ರತಿಯೊಬ್ಬ ಕರಿಯವನ ಮತ್ತು ಕೆಂಪಗೆ ಇರುವವನನ್ನು ಎದುರಿಸಲು ಸಿದ್ಧರಾಗಿರಬೇಕು. ಆಗ ಜನರು ಹೇಳಿದರು: ನಮಗೆ ಅದು ತಿಳಿದಿದೆ. ಆದರೆ ಯಾ ರಸೂಲುಲ್ಲಾಹ್, ನಮಗೆ ಅದಕ್ಕೆ ಪ್ರತಿಫಲವಾಗಿ ಏನು ದೊರಕುವುದು? ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಿಮಗೆ ಅಲ್ಲಾಹನಿಂದ ಸ್ವರ್ಗ ಸಿಗುವುದು. ಅದು ಅಲ್ಲಾಹನ ಎಲ್ಲಾ ಪಾರಿತೋಷಿಕಗಳಿಗಿಂತ ಮಿಗಿಲಾದುದಾಗಿದೆ. ಆಗ ಎಲ್ಲರೂ ಹೇಳಿದರು: ನಮಗೆ ಈ ಒಪ್ಪಂದ ಅಂಗೀಕಾರಾರ್ಹವಾಗಿದೆ. ಯಾ ರಸೂಲುಲ್ಲಾಹ್, ತಮ್ಮ ಕೈ ಮುಂದೆ ಇರಿಸಿರಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ಅನುಗ್ರಹ ಭರಿತ ಕೈ ಚಾಚಿದರು. ಆ ಎಪ್ಪತ್ತು ಜೀವಾರ್ಪಣೆ ಮಾಡುವವರು ಒಂದು ಭದ್ರತೆಯ ಒಪ್ಪಂದದಲ್ಲಿ ತಮ್ಮನ್ನು ಅವರ ಕೈಯಲ್ಲಿ ಭದ್ರ ಮಾಡಿದರು. ಈ ಬೈಅತ್, ಬೈಅತೆ ಅಖಬ ಸಾನಿಯ ಎಂಬ ಹೆಸರಲ್ಲಿ ಪ್ರಸಿದ್ಧವಾಗಿದೆ.

ಈ ಬೈಅತ್ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರೊಂದಿಗೆ ಹೇಳಿದರು: ಪ್ರವಾದಿ ಮೂಸಾ ತನ್ನ ಕೋಮಿನ ಜನರಿಂದ 12 ನಖೀಬ್‌ರನ್ನು ಆಯ್ಕೆ ಮಾಡಿದ್ದರು. ಆ ನಖೀಬ್‌ಗಳು ಪ್ರವಾದಿ ಮೂಸಾರ ಕಡೆಯಿಂದ ಜನರ ಮೇಲ್ವಿಚಾರಕರೂ ಸಂರಕ್ಷಕರೂ ಆಗಿದ್ದರು. ನಾನು ಸಹ ನಿಮ್ಮವರಿಂದ ಹನ್ನೆರಡು ನಖೀಬ್‌ಗಳನ್ನು ನೇಮಿಸಲು ಇಚ್ಛಿಸುತ್ತೇನೆ. ಅವರು ನಿಮ್ಮ ಮೇಲ್ವಿಚಾರಕರೂ ಸಂರಕ್ಷಕರೂ ಆಗುವರು. ಅವರು ನನಗೆ ಪ್ರವಾದಿ ಈಸಾರವರ ಶಿಷ್ಯರ ಹಾಗೆ ಆಗಿರುವರು. ಅವರು ನನ್ನೆದುರಿಗೆ ತಮ್ಮ ಕೋಮಿನ ಪರವಾಗಿ ಉತ್ತರ ನೀಡುವವರಾಗುವರು. ನೀವು ಅರ್ಹರಾದವರ ಹೆಸರುಗಳನ್ನು ನನ್ನ ಮುಂದೆ ಇರಿಸಿರಿ. ಹಾಗೆ ಹನ್ನೆರಡು ಜನರ ಹೆಸರುಗಳನ್ನು ಸೂಚಿಸಲಾಯಿತು. ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದಕ್ಕೆ ಮಂಜೂರಾತಿ ನೀಡಿದರು. ಈ ನಖೀಬ್‌ಗಳನ್ನು ಒಂದೊಂದು ಗೋತ್ರದ ಮೇಲ್ವಿಚಾರಕರಾಗಿ ನಿಶ್ಚಯಿಸಲಾಯಿತು ಮತ್ತು ಅವರ ಕರ್ತವ್ಯಗಳನ್ನು ವಿವರಿಸಿಕೊಡಲಾಯಿತು. ಕೆಲವು ಗೋತ್ರಗಳಿಗೆ ಇಬ್ಬರು ನಖೀಬರನ್ನು ನಿಶ್ಚಯಿಸಲಾಗಿತ್ತು. ನಖೀಬರನ್ನು ನೇಮಿಸಿದ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಚಿಕ್ಕಪ್ಪ ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್ ಅನ್ಸಾರ್‌ಗಳೊಂದಿಗೆ ಅವರು ಬಹಳ ಜಾಗರೂಕತೆಯಿಂದ ವರ್ತಿಸಬೇಕೆಂದು ಒತ್ತಿ ಹೇಳಿದರು. ಏಕೆಂದರೆ ಖುರೈಶಿಗಳ ಗೂಢಚಾರರು ಎಲ್ಲಾ ಕಡೆಗಳಿಗೂ ದೃಷ್ಟಿಯನ್ನು ಇರಿಸಿರುತ್ತಾರೆ. ಅವರಿಗೆ ಇಲ್ಲಿ ನಡೆದ ಸಂಭವಗಳ ಸಮಾಚಾರ ತಲಪದಂತೆ ನೋಡಿಕೊಳ್ಳಬೇಕು ಮತ್ತು ತೊಂದರೆಗಳು ಉಂಟಾಗದಂತೆ ಜಾಗ್ರತೆ ವಹಿಸಬೇಕು.

(ಹುಝೂರ್ ಹೇಳಿದರು:) ಹಝ್ರತ್ ಸಅದ್ ಬಿನ್ ಉಬಾದರಿಗೆ ಸಂಬಂಧಿಸಿ ಇನ್ನು ಸಹ ವಿವರಿಸಲಿಕ್ಕಿದೆ. ಇನ್‌ಶಾಅಲ್ಲಾಹ್ ಮುಂದಿನ ಖುತ್‌ಬದಲ್ಲಿ ವಿವರಿಸುವೆನು.

—————————*****—————————

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَنَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ - عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَآءِ ذِي الْقُرْبٰى وَ يَنْهٰى
عَنِ الْفَحْشَآءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ-


***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 20-12-2019*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim |***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon